**ರಭಸದಿಂದ ಹರಿಯುವ ಗಂಗೆಯನ್ನು ನೋಡಿದಾಗ ಇಷ್ಟೇಕೆ ಕಪ್ಪು ನೀರು? ಎಲ್ಲರ ಪಾಪ ತೊಳೆಯುತ್ತ ಇಷ್ಟೊಂದು ಹೊಲಸನ್ನು ತನ್ನ ಮಡಿಲಲ್ಲಿ ಹಾಕಿಕೊಂಡಳೇ ಗಂಗೆ! ಎನಿಸುತ್ತದೆ. ಆದರೆ, ಗಂಗೆಯ ನೀರು ಬತ್ತುವುದಿಲ್ಲ, ಹರಿಯುತ್ತಲೇ ಇರುತ್ತದೆ.**

"ಅಕ್ಕಾ" ಎಂದು ಯಾರೋ ಕೂಗಿದ್ದು ಕೇಳಿಸಿದರೂ ಅದು ನನಗೇ ಹೌದೋ ಅಲ್ಲವೋ ಗೊತ್ತಾಗಲಿಲ್ಲ. ನಾನು ಸುಮ್ಮನೇ ಪ್ರದಕ್ಷಿಣೆ ಹಾಕುತ್ತಿದ್ದೆ. ಆದರೆ, ತೀರಾ ಹತ್ತಿರದಲ್ಲಿ ಸಣ್ಣ ದನಿಯಲ್ಲಿ ಮತ್ತೊಮ್ಮೆ "ಅಕ್ಕಾ" ಎಂದಾಗ ತಿರುಗಿದೆ. ಅವಳು ನನಗೆ ತೀರ ಸಮೀಪದಲ್ಲಿ ನಿಂತು ಪಿಸುನುಡಿದಿದ್ದು ತಿಳಿಯಿತು. ಛೇ! ಇವಳ್ಯಾಕೆ ನನ್ನನ್ನು ಕೂಗುತ್ತಿದ್ದಾಳೆ? ನಾನು ಒಂದು ದಿನವೂ ಅವಳೆಡೆಗೆ ಕಣ್ಣೆತ್ತಿ ನೇರವಾಗಿ ನೋಡಿದವಳಲ್ಲ. ಪರಿಚಯ, ನಗು ಎಲ್ಲಾ ದೂರದ ಮಾತು.

"ಅಕ್ಕಾ, ನಾಳೆ ನಿಮಗ ರಜಾ ಇರ್ತದ. ಒಂದ್ಹೈದು ನಿಮಿಷ ನಿಮ್ಮನಿಗೆ ಬಂದುಹೋಗ್ಲ್ಯಾ? ನಿಮ್ಮ ಜೋಡಿ ಒಂದ್ನೂರು ಮಾತಾಡೋದದ."

ಇವಳಿಗೇನಪ್ಪಾ ನನ್ನ ಜೊತೆ ಮಾತಾಡೋವಂಥದ್ದು? ಮನೆಗೇ ಬರುತ್ತೇನೆ ಅಂತಾಳೆ. ಎಷ್ಟು ಧೈರ್ಯ ಅಂತ! ಏನು ಹೇಳಲಿ? ಇವಳನ್ನ ಮನೆಯಲ್ಲಿ ಬಿಟ್ಟುಕೊಳ್ಳೋದಾದ್ರೂ ಹೇಗೆ? ಆದರೆ, ತಾನಾಗಿ ಬರ್ತೀನಿ ಅಂದ್ರೆ ಬೇಡ ಅಂತ ಹೇಳೋದು ಹೇಗೆ? ಅದು ಗೃಹಸ್ಥ ಧರ್ಮವಲ್ಲ. ನಾನು ಕೆಲಸಕ್ಕೆ ಹೋಗೋದು, ನಾಳೆ ಭಾನುವಾರ ರಜೆ ಇರೋದು ಎಲ್ಲಾ ಗೊತ್ತಿದೆ ಇವಳಿಗೆ. ಬೇಸರದಿಂದಲೇ, "ಹೂಂ, ಬಾ. ಹನ್ನೊಂದು ಗಂಟೆ ಮೇಲೆ ಬಾ" ಎಂದು ಮುಗುಮ್ಮಾಗಿ ಹೇಳಿದೆ. ಪ್ರದಕ್ಷಿಣೆ ಮುಗಿದ ನಂತರ ಎಂದಿನಂತೆ ಗುಡಿಯ ಒಳಕಟ್ಟೆಯ ಮೇಲೆ ಕೂಡಲಿಲ್ಲ. ಮತ್ತೆ ಅಲ್ಲಿಗೂ ಬಂದು ಮಾತು ಹಚ್ಚಿದರೆ ಎಂದುಕೊಂಡು ಬೇಗನೇ ಮನೆಗೆ ಮರಳಿದೆ.

ಅವಳು ಯಾಕೆ ಬರ್ತಾಳೆ ನಮ್ಮ ಮನೆಗೆ? ಊಟ ಮಾಡಿ ಹಾಸಿಗೆಯ ಮೇಲೆ ಮೈಯೊಡ್ಡಿ, ಕಣ್ಣು ಮುಚ್ಚಿದರೂ ಮನಸ್ಸಿಗೆ ವಿಶ್ರಾಂತಿಯಿಲ್ಲ. ಅವಳು, ಪುಷ್ಪಾ. ನಮ್ಮ ಪಕ್ಕದ ಓಣಿಯಲ್ಲಿ ವಾಸವಾಗಿರುವವಳು. ಮೂವತ್ತೈದು–ನಾಲವತ್ತಿರಬಹುದೇನೋ ವಯಸ್ಸು! ಯಾರಿಗೆ ಗೊತ್ತು? ಇವಳಂಥವರ ಎರಡಿಂಚು ದಪ್ಪದ ಮೇಕಪ್ಪಿನ ಕೆಳಗೆ ಅಡಗಿರುವ ಚರ್ಮದ ಸುಕ್ಕುಗಳು ಹೊರಗಿನವರ ಕಣ್ಣುಗಳಿಗೆ ಕಾಣಲಾರವು. ಇನ್ನು ಇವಳ ಡ್ರೆಸ್ಸುಗಳು, ಕೈಬಳೆಗಳು, ಕಿವಿಯಲ್ಲಿ ತೂಗಾಡುವ ಝುಮಕಿಗಳು, ಎಲ್ಲಾ ಇವಳು ಸಣ್ಣವಳೆಂಬ ಭ್ರಮೆ ಹುಟ್ಟಿಸುತ್ತವೆ. ಆದರೆ, "ಅವಳು ನಮ್ಮದೇ ವಾರ್ಗಿ. ನಮ್ಮ ಜೋಡಿ ಸಾಲಿಗೆಲ್ಲಾ ಬರ್ತಿದ್ದಳು. ಮ್ಯಾಟ್ರಿಕ್ಕು ಪಾಸೂ ಆದಳು. ಒಂದೆರಡು ವರ್ಷ ಕಾಲೇಜಿಗೆ ಮಣ್ಣು ಹೊತ್ತಿರಬೇಕು, ಅಷ್ಟೊತ್ತಿಗೆ ಅವರಪ್ಪ ಅಕಿನ್ನೂ ದಂಧೆಗೆ ಹಚ್ಚಿಬಿಟ್ಟ" ಎಂದು ನಮ್ಮ ಪಕ್ಕದ ಮನೆಯ ನಯನಾ ಒಂದು ದಿನ ಹೇಳಿದಳು. ಆವತ್ತು ಪುಷ್ಪಾ ತುಂಬ ಮೇಕಪ್ ಮಾಡಿಕೊಂಡು ನಮ್ಮ ಮನೆಯ ಎದುರಿನಿಂದಲೇ ಹೋಗುತ್ತಿದ್ದಳು. ಅವಳನ್ನು ನೋಡಿ ನಾನು, "ಯಪ್ಪಾ ಎಷ್ಟ್ ಮೇಕಪ್ ಮಾಡಕೊಂಡಾಳ ನೋಡು" ಎಂದು ಅವಳು ಹೋದತ್ತಲೇ ನೋಡುತ್ತ ತುಸು ಆಶ್ಚರ್ಯದಿಂದ, ತುಸು ಅಸಹ್ಯದಿಂದ ನುಡಿದಿದ್ದೆ. ನನಗೆ ಗೊತ್ತಿಲ್ಲದ ಅವಳ ಹೀನ ಚರಿತ್ರೆಯ